ಓ ಎಸ್ಃ 301/2017

ಪಿ ಡಬ್ಲ್ಯೂ ಃ 1

ದಿನಾಂಕಃ 13.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**ವಾಟೀ ಸವಾಲುಃ ಪ್ರತಿವಾದಿ 6 ರವರ ಪರ ಶ್ರೀ ಎಸ್ ಜಿ ಆರ್ ವಕೀಲರಿಂದಃ**

**ಸಾಕ್ಷಿಗೆ ಈಗ ಎರಡು ದಾಖಲಾತಿಗಳನ್ನು ತೋರಿಸಲಾಗಿ ಸದರಿ ದಾಖಲಾತಿಗಳು ದೊಡ್ಡಬಳ್ಳಾಪುರ ಉಪ ನೋಂದಣಾಧಿಕಾರಿಗಳ ಕಚೇರಿಯಲ್ಲಿ ಇರುವ ರಿಜಿಸ್ಟರ್ ನ ಪ್ರತಿಗಳು ಮತ್ತು ಸದರಿ ಪ್ರತಿಗಳನ್ನು pending registration ಆದಾಗ ಪಡೆದಿರುವ ಹೆಬ್ಬೆಟ್ಟು ಮತ್ತು ರಿಜಿಸ್ಟರ್ ನ ಪ್ರತಿಗಳು ಎಂದು ಸಾಕ್ಷಿ ಗುರುತಿಸಿದ ಮೇರೆಗೆ ಸದರಿ ದಾಖಲಾತಿಗಳನ್ನು ನಿ ಡಿ 8 ಮತ್ತು ನಿ ಡಿ 9 ಎಂದು ಗುರುತಿಸಲಾಯಿತು.** ಸ.ನಂ. 113/5 ಹಾಲಿ ಐಟಂ ನಂಬರ್ 6 ಮತ್ತು ಸ.ನಂ. 108/3 ನಮ್ಮ ತಂದೆಯ ಸ್ವಯಾರ್ಜಿತ ಸ್ವತ್ತು ಎಂದರೆ ಸಾಕ್ಷಿ ಸದರಿ ಸ್ವತ್ತುಗಳು ನಮ್ಮ ಪಿತ್ರಾರ್ಜಿತ ಸ್ವತ್ತು ಎಂದು ನುಡಿಯುತ್ತಾರೆ.

ನಾನು 1968 ರಲ್ಲಿ ಜನಿಸಿರುತ್ತೇನೆ. ನಾನು ತಂದೆಯವರು ಸದರಿ ಸ್ವತ್ತುಗಳನ್ನು 1956 ರಲ್ಲಿ ನಾನು ಜನಿಸುವ ಮುಂಚೆ ಖರೀದಿ ಮಾಡಿದ್ದರು ಎಂದರೆ ಸರಿ. ನನ್ನ ತಂದೆಗೆ ಇಬ್ಬರು ಹೆಂಡತಿಯರು . ಮೊದಲನೆ ಹೆಂಡತಿ ಲಕ್ಷ್ಮಮ್ಮ ಅಲಿಯಾಸ್ ಲಕ್ಕಮ್ಮ ಮತ್ತು 2ನೆ ಹೆಂಡತಿ ರಾಮಕ್ಕ ಎಂದರೆ ಸರಿ. ನನ್ನ ತಂದೆಯವರು ಲಕ್ಷ್ಮಮ್ಮ ಅಲಿಯಾಸ್ ಲಕ್ಕಮ್ಮ ನವರ ಪೌತಿ ನಂತರ 2ನೆ ಹೆಂಡತಿ ರಾಮಕ್ಕ ನವರನ್ನು ಮದುವೆಯಾಗಿದ್ದರು ಎಂದರೆ ಸರಿ.

ದಿನಾಂಕ ಃ 24.03.1977 ರಲ್ಲಿ ಪಂಚಾಯಿತಿ ಪಾರಿಕತ್ ಮೂಲಕ ನಮ್ಮ ತಂದೆಯವರು ಮತ್ತು ಅವರ ದೊಡ್ಡ ಹೆಂಡತಿ ಮತ್ತು ಚಿಕ್ಕ ಹೆಂಡತಿರವರ ಮಕ್ಕಳು ವಿಭಾಗ ಆಗಿರುತ್ತಾರೆ ಎಂದರೆ ಸುಳ್ಳು. ಅಂದಿನಿಂದ ನನ್ನ ತಂದೆಯ ದೊಡ್ಡ ಹೆಂಡತಿ ಮತ್ತು ಚಿಕ್ಕ ಹೆಂಡತಿರವರ ಮಕ್ಕಳು ಬೇರೆ ಬೇರೆಯಾಗಿ ವಾಸ ಮಾಡಿಕೊಂಡು ಬರುತ್ತಿದ್ದೇವೆ ಎಂದರೆ ಸಾಕ್ಷಿ ಪ್ರತ್ಯೇಕವಾಗಿ ವಾಸ ಮಾಡುತ್ತಿರುವುದು ನಿಜ ಎಂದು ನುಡಿಯುತ್ತಾರೆ ಮತ್ತು ಬೇರೆ ಬೇರೆ ವ್ಯವಹಾರ ಮಾಡುತ್ತಿದ್ದೇವೆ ಎಂದರೆ ಸುಳ್ಳು. ನಾನು ಕೂಲಿ ಮಾಡಿಕೊಂಡು ದೊಡ್ಡಬಳ್ಳಾಪುರದಲ್ಲಿ ವಾಸವಾಗಿರುತ್ತೇನೆ ಎಂದು ನುಡಿಯುತ್ತಾರೆ. 1977 ರ ನಂತರ ದೊಡ್ಡ ಹೆಂಡತಿ, ಮಕ್ಕಳು ಪ್ರತ್ಯೇಕವಾಗಿ ಅವರ ವ್ಯವಹಾರ ಮಾಡಿಕೊಂಡು ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದು ಪ್ರತ್ಯೇಕವಾಗಿ ಹಣಕಾಸಿನ ವ್ಯವಹಾರ ಮಾಡಿಕೊಂಡು ಅದೇ ನಾವುಗಳು ಕೂಡ ಪ್ರತ್ಯೇಕವಾಗಿ ಹಣಕಾಸಿನ ವ್ಯವಹಾರ ಮಾಡಿಕೊಂಡು ಪ್ರತ್ಯೇಕವಾಗಿ ಇರುತ್ತೇವೆ ಎಂದರೆ ಸರಿ. ನಮ್ಮ

ವ್ಯವಹಾರವನ್ನು ನಾನು ದೊಡ್ಡಬಳ್ಳಾಪುರದಲ್ಲಿ ಪ್ರತ್ಯೇಕವಾಗಿ ಮಾಡಿಕೊಂಡು ಬರುತ್ತಿದ್ದೇನೆ ಎಂದರೆ ಸಾಕ್ಷಿ ನಾನು ಪ್ರತ್ಯೇಕವಾಗಿ ಜೀವನ ಮಾಡಿಕೊಂಡು ವಾಸವಿದ್ದೇನೆ ಎಂದು ನುಡಿಯುತ್ತಾರೆ.

ನಾನು ವಾಸ ಇರುವ ಮನೆ ನನ್ನ ಹೆಸರಿನಲ್ಲಿ ಇರುತ್ತದೆ ಎಂದರೆ ಸಾಕ್ಷಿ ನನ್ನ ಹೆಂಡತಿಯ ಹೆಸರಿನಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳಿಗೆ ಭಾಗ ಕೊಡಿ ಎಂದು ಯಾವಾಗ ಕೇಳಿರುತ್ತೇನೆ ಎಂದು ನನಗೆ ದಿನಾಂಕ ನೆನಪಿರುವುದಿಲ್ಲ, ಸುಮಾರು 10 ವರ್ಷಗಳಾಗಿರಬಹುದು. ಯಾವುದೇ ಪಂಚಾಯಿತಿ ಮಾಡಿಸಿ ಭಾಗ ಕೇಳಿರುವುದಿಲ್ಲ. ನನ್ನ ಹೆಂಡತಿ ಸರ್ಕಾರಿ ನೌಕರಿಯಲ್ಲಿರುವುದಿಲ್ಲ. ನನ್ನ ಹೆಂಡತಿಗೆ ಯಾವುದೇ ಸ್ವತಂತ್ರ ಆದಾಯ ಇರುವುದಿಲ್ಲ.

ಪ್ರತಿವಾದಿಗಳು ಏನು ತಕರಾರು ಹಾಕಿರುತ್ತಾರೆ ಎಂದು ನಾನು ಓದಿ ತಿಳಿದುಕೊಂಡಿರುವುದಿಲ್ಲ. ದಾವಾ ಐಟಂ ನಂಬರ್ 2 ಸ.ನಂ. 23 ಹೊಸ ಸ.ನಂ. 23/8 ರಲ್ಲಿ ದೊಡ್ಡ ಹೆಂಡತಿ ಮಕ್ಕಳು ಪೂರ್ವ ದಿಕ್ಕಿನ ಕಡೆ 20 ಗುಂಟೆ ಮತ್ತು ಪಶ್ಚಿಮದ ಕಡೆಗೆ ಚಿಕ್ಕ ಹೆಂಡತಿರವರ ಮಕ್ಕಳು 27 ಗುಂಟೆ ಜಮೀನನ್ನು ವಿಭಾಗ ಮಾಡಿಕೊಂಡು ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸಾಕ್ಷಿ ಯಾವಾಗ ವಿಭಾಗ ಮಾಡಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ವಿಭಾಗ ದಿನಾಂಕ ಃ 24.03.1977 ರಲ್ಲಿ ಆಗಿರುತ್ತದೆ ಎಂದರೆ ಸಾಕ್ಷಿ ವಿಭಾಗ ಆಗಿರಬಹುದು, ನನಗೆ ಗೊತ್ತಿಲ್ಲ, ಆದರೆ ನನಗೆ ಭಾಗ ನೀಡಿರುವುದಿಲ್ಲ **ಎಂದು ನುಡಿಯುತ್ತಾರೆ.**

**ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ**